International Journal of Research in Economics and Social Sciences(IJRESS)
Available online at: http://euroasiapub.org
Vol. 8 Issue 2, February- 2018
ISSN(o): 2249-7382 | Impact Factor: 6.939 |

# THOUGHTS ON SOCIAL REFORM IN THE POEMS OF KANAKADASA

## ಕನಕದಾಸರ ಕೀರ್ತನೆಗಳಲ್ಲಿ ಸಮಾಜ ಸುಧಾರಣೆಯ ಚಿಂತನೆಗಳು

Dr. D.K. Saraswathi
Associate Professor of Kannada
Government First Grade Women's College
Madikeri

ಸಮಾಜದ ಹಿತ ಕನ್ನಡ ಕೀರ್ತನಕಾರರ ಸಾಹಿತ್ಯೋದ್ದೇಶದ ಪ್ರಮುಖ ಸ್ಫೂರ್ತಿ. ಹೇಗೆ ಬದುಕಬೇಕು, ಹೇಗೆ ಬದುಕಿದರೆ ಒಳಿತು ಎಂಬುದನ್ನು ಇಡೀ ಸಮಾಜಕ್ಕೆ ಸೂಕ್ಷ್ಮವಾಗಿಯೂ ನವಿರಾಗಿಯು ತಲುಪಿಸುವ ಕಾರ್ಯವನ್ನು ಕನಕದಾಸ ಮಾಡಿದರು. ಕನ್ನಡ ನಾಡಿನ ಹಳ್ಳಿಗಳಲ್ಲಿ ದಿನಬೆಳಗಾದರೆ ದೇವರ ಪದಗಳನ್ನು ಹಾಡುತ್ತಾ ವಿಶಿಷ್ಟ ಉಡುಪು ಅಲಂಕಾರಗಳ ದಾಸಯ್ಯರು ಬೀದಿ ಬೀದಿಗಳಲ್ಲಿ ಸುಳಿದಾಡುವ ದೃಶ್ಯ ಸಾಮಾನ್ಯವಾಗಿತ್ತು.

ಮನೆಯ ಗೃಹಿಣಿಯರು ವ್ರತ, ನಿಯಮ, ಅರತಿ ಮೊದಲಾದ ಶುಭ ಸಮಯದಲ್ಲಿ ದಾಸರ ಕೀರ್ತನೆಗಳನ್ನು ಹಾಡಿಕೊಳ್ಳುತ್ತಾರೆ. ದೇವರ ನಾಮವೆಂದೇ ಪ್ರಸಿದ್ಧವಾಗಿ ಕನ್ನಡ ನಾಲಗೆಯ ಮೇಲೆ ಸದಾ ನಲಿದಾಡಿದ ಸಾಹಿತ್ಯ ಪ್ರಕಾರ. ಕೀರ್ತನೆಗಳಲ್ಲಿ ಭಕ್ತಿಯೇ ಮುಖ್ಯಭಾವವನ್ನು ಹೊಂದಿದ್ದರೂ, ತಮ್ಮ ಇಷ್ಟ ದೈವವನ್ನು ಭಕ್ತಿಯ ನಾನಾ ಮುಖಗಳಿಂದ ಅರ್ಚಿಸುತ್ತಾ ತಮ್ಮ ದಾರಿಯನ್ನು ಕಂಡುಕೊಳ್ಳುವುದರೊಂದಿಗೆ ಸಮಾಜದಲ್ಲಿ ಒಂದು ಉತ್ತಮ ಹಾದಿಯನ್ನು ಸಿದ್ಧಪಡಿಸಿದರು. ಸಂಸಾರದ ನಿಸ್ಸಾರತೆ ನಶ್ವರತೆಯನ್ನು ಎತ್ತಿ ಹಿಡಿಯುವುದು, ತನ್ಮೂಲಕ ಲೌಕಿಕ ಭೋಗದಲ್ಲಿ ತೊಡಗಿ ಯಾವ ಹೇಯಕಾದರೂ ಸಿದ್ಧವಾಗುವ ಮನಸ್ಸನ್ನು ಭಗವಂತನ ಕಡೆ ತಿರುಗಿಸುವುದು, ಹಾಗೆ ತಿರುಗಿಸಿ ಶಾಶ್ವತವಾದ ಸುಖದ ಕಡೆಗೆ ಜನ ಸಾಮಾನ್ಯನನ್ನು ಒಯ್ಯುವುದು ಕೀರ್ತನೆಗಳ ಒಟ್ಟು ಗುರಿ. ವೈಯುಕ್ತಿಕ ಸದ್ಗತಿಯ ಸ್ವಾರ್ಥಕ್ಕೆ ಮಾತ್ರ ತುಡಿಯದೆ ಇಡಿ ಒಂದು ಸಮಾಜದ ಉನ್ನತಿಗೆ ಪ್ರಯತ್ನಿಸಿದ ರೀತಿ ವಿಶಿಷ್ಟವಾದುದು ಮತ್ತು ಸಾಮಾಜಿಕವಾಗಿ ಮಹತ್ವದ್ದು.

ಕನಕದಾಸರು ತಮ್ಮ ಕೃತಿಗಳಲ್ಲಿ ಹೆಚ್ಚಾಗಿ ಶಾಸ್ತ್ರ ಜಂಜಡಗಳಿಗೆ, ಮತ ತತ್ವ ಪ್ರತಿಪಾದನೆಗೆ ಮನಗೊಡದೆ ಏಕಾಂತ ಭಕ್ತಿಯನ್ನೂ, ಸರ್ವಾರ್ಪಣ ಮನೋಭಾವವನ್ನು ಜಗತ್ತಿನÀ ಚಟುವಟಿಕೆಗಳು ಹರಿಚಾಲಿತ ಎಂಬ ತತ್ವವನ್ನು ಪ್ರತಿಪಾದಿಸುತ್ತಾರೆ. ಸಾಮಾಜಿಕ ಗೀತೆಗಳಲ್ಲಿ ಜನತೆಯ ಮೌಢ್ಯ, ಕಂದಾಚಾರ ಪೊಳ್ಳು ನಂಬಿಕೆ, ವರ್ಣವ್ಯವಸ್ಥೆಯ ಠÀಕ್ಕನ್ನು ಕಟುವಾಗಿ ತೀವ್ರವಾಗಿ ಖಂಡಿಸುತ್ತಾರೆ. ಅವರು ಜನರ ನಡವಳಿಕೆ ಸಮಾಜದಲ್ಲಿ ಬೇರು ಬಿಟ್ಟ ರೂಢಿಗತವಾದ ಸಂಪ್ರದಾಯಗಳು, ಜಾತಿ ಮತ ವ್ಯವಸ್ಥೆಗಳು, ಬಡವ, ಬಲ್ಲಿದ, ಮೇಲು ಕೀಳೆಂಬ ತಾರತಮ್ಯ ಹಳಸಲು ಮೌಲ್ಯಗಳು, ಬದುಕಿನ ಅಡಂಬರ ಮೊದಲಾದ ವಿಚಾರಗಳನ್ನು ವಿಡಂಬಿಸಿರುವ ರೀತಿ ಅನನ್ಯವಾದುದು.

ವರ್ಣ ವರ್ಗ ಆಧಾರಿತ ಭಾರತೀಯ ಸಮಾಜದ ಬಾಹ್ಯ ಚಹರೆ ಬದಲಾಗಿರಬಹುದು. ಆದರೆ ಅಂತರಂಗದ ವಿಷಯ ತೀವ್ರತೆ ತಗ್ಗಿಲ್ಲ. ವರ್ಣವ್ಯವಸ್ಥೆಯನ್ನು ಕಡು ವಿರೋಧಿಸಿದ ಕನಕದಾಸರು ತನ್ನ ಹೀನ ಜಾತಿಯ ದೆಸೆಯಿಂದಾಗಿ ವಿವಿಧ ಸನ್ನಿವೇಶಗಳಲ್ಲಿ ಅನುಭವಿಸಿದ ಅಪಮಾನ, ನೋವು ಕೊನೆ ತನಕ ಬೆನ್ನ ಬಿಡಲಿಲ್ಲ. ಆ ಕಾರಣದಿಂದಲೆÉೀ ಅವರ ಕೀರ್ತನೆಗಳು ಮೇಲ್ಜಾತಿಯವರನ್ನು ಪ್ರಶ್ನಿಸುವಂತಿದೆ ಮತ್ತು ಒಟ್ಟು ವ್ಯವಸ್ಥೆಗೆ ಪ್ರತಿಭಟನೆಯಾಗಿದೆ.

ಕುಲ ಕುಲವೆನ್ನುತಿರು
ಕುಲವಾವುದು ಸತ್ಯ ಸುಜನರಿಗೆ
ಕೆಸರೊಳು ತಾವರೆ ಪುಟ್ಟಲು ಅದ ತಂದು
ಕುಸುಮನಾಭನಿಗೆ ಅರ್ಪಿಸರೇನಯ್ಯ ?
ಆತ್ಮನಾವ ಕುಲ ಜೀವನಾವ ಕುಲ
ತತ್ತ್ವೇಂದ್ರಿಯಗಳ ಕುಲ ಪೇಳಿರಯ್ಯ
ಆತ್ಮನು ಕಾಗಿನಲೆಯಾದಿಕೇಶವನೊಲಿದ
ಭಕ್ತರಿಗೆ ಕುಲವಾವುದು ಹೇಳಿರಯ್ಯ

ಸತ್ಯವಂತರಾದ ಜನಕ್ಕೆ ಯಾವುದೇ ಕುಲವಿಲ್ಲ. ವಸ್ತು ಅಥವಾ ವ್ಯಕ್ತಿಗಳ ಗುಣಶೀಲಗಳನ್ನು ನಾವು ಗಮನಿಸಬೇಕೇ ಹೊರತು ಅವುಗಳ ಅಥವಾ ಅವರ ಹುಟ್ಟನ್ನಲ್ಲ, ಜಾತಿಯನ್ನಲ್ಲ ಎಂಬುದನ್ನು ಹಲವು ಸುಪರಿಚಿತ ನಿದರ್ಶನಗಳ ಮೂಲಕ ದಾಸರು ವಿವರಿಸುತ್ತಾ ಭಗವಂತನು ಯಾರಿಗೆ ಒಲಿಯುತ್ತಾನೋ ಅವನ ಕುಲವನ್ನು ಗಣಿಸಬಾರದೆಂದು ಸೂಚಿಸಿದ್ದಾರೆ. ಶೂದ್ರ ಕನಕದಾಸರನ್ನು ಅಂದಿನ ಸಮಾಜ ಅವರ ಪಾಂಡಿತ್ಯ, ಪ್ರತಿಭೆ, ಅನುಭವಗಳ ಪ್ರಭಾವವನ್ನು ಕಂಡೂ ಮುಕ್ತವಾಗಿ ಸ್ವೀಕರಿಸಲು ಮುಂದಾಗಲಿಲ್ಲ. ಇದಕ್ಕೆ ಕೊಡುವ ಕಾರಣ ಒಂದೇ ಒಂದು ಜಾತಿ. ಆಗ ಕನಕದಾಸರು ಕುಲವನ್ನೇ ಪ್ರಶ್ನಿಸುತ್ತಾರೆ. ಜಾತಿಯ ಹೆಸರನ್ನು ಹೇಳುತ್ತ ಪರಸ್ಪರ ಕಚ್ಚಾಡುವ ಜನರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಅತ್ಯಂತ ಉಚಿತ ಮತ್ತು ಪರಿಚಿತವಾದ ಉದಾಹರಣೆಗಳ ಮೂಲಕ ಜಾತಿಯ ಅಸ್ತಿತ್ವವನ್ನು ಅಲ್ಲಗಳೆದು ನೀರಗುಳ್ಳೆಯಂತೆ ಕ್ಷಣಿಕವಾದ ದೇಹವನ್ನು ನಚ್ಚದೆ ಭಗವಂತನನ್ನು ಮಾನವ ನೆನೆಯಬೇಕೆಂದು ಘೋಷಿಸುತ್ತಾರೆ. ಹರಿಯೇ ಸರ್ವಶ್ರೇಷ್ಟ ಜಗತ್ತೆಲ್ಲ ಹರಿಮಯ ಅವನನ್ನು ಆರಾಧಿಸುವನೇ ನಿಜವಾದ ಕುಲಜ ಎಂದು ಸಾರುತ್ತಾರೆ.

ಕನಕದಾಸರ ಕೀರ್ತನೆಗಳು ನಮ್ಮ ಸಾಮಾಜಿಕ ಮೌಲ್ಯವನ್ನು ತಿಳಿಸುತ್ತದೆ. ಸಾಮಾಜಿಕ ಚಿಂತನೆಯ ಸ್ವರೂಪವನ್ನು ಪ್ರಕಟಪಡಿಸುತ್ತದೆ. ಉತ್ತಮ ಕುಲದವರು ಎನ್ನುವವರೆಲ್ಲ ಕೀಳುಮಟ್ಟದ ವಸ್ತುಗಳನ್ನು ಬಳಸುತ್ತಾರೆ ಎನ್ನುವುದಕ್ಕೆ ಕೆಸರಲ್ಲಿ ಹುಟ್ಟಿದ ಕಮಲ, ಹಸುವಿನ ಹಾಲು ಕಸ್ತೂರಿ ಸುಗಂಧದ ದೃಷ್ಟಾಂತವನ್ನು ಕೊಡುತ್ತಾನೆ. ಇವೆಲ್ಲವೂ ಶೂದ್ರನಿಗಿಂತ ಕೆಳಮಟ್ಟದಲ್ಲವೇ ಎಂದು ಹೇಳುತ್ತಾರೆ.

ಸಾಧು-ಸನ್ಯಾಸಿ, ದಾಸ-ಜಂಗಮ ಮುಂತಾದ ವೇಷಗಳ ಮೂಲಕ ಜಗತ್ತಿನಲ್ಲಿ ನಡೆಯುತ್ತಿರುವ ಕಪಟ, ವಂಚನೆ, ದುವ್ಯವಹಾರಗಳಿಗೆ ಲೆಕ್ಕವೇ ಇಲ್ಲ ತಾವೇ ಕಂಡ ಅಂಥಹ ದುಷ್ಕøತ್ಯಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸುತ್ತಾರೆ.

"ಜಪವ ಮಾಡಿದರೇನು ತಪವ ಮಾಡಿದರೇನು ಕಪಟಗುಣ ವಿಪರೀತ ಕಲುಷವಿದ್ದವರು" ಎಂದು ಪ್ರಶ್ನಿಸುತ್ತಾರೆ. "ನೇಮವಿಲ್ಲದ ಹೋಮವೇತಕಯ್ಯ" ಎಂದು ಢಾಂಭಿಕತನವನ್ನು ವೃತ್ತಿಯಲ್ಲಿ ಪ್ರದರ್ಶಿಸುವುದನ್ನು ಖಂಡಿಸುವರು. ಇಡೀ ಮನುಕುಲವನ್ನು ಸಮದೃಷ್ಟಿಯಿಂದ ನೋಡುವ ಕನಕದಾಸರಿಗೆ ಮುಸ್ಲಿಮರಾಗಲಿ, ವೈಷ್ಣವರಾಗಲಿ, ಲಿಂಗಾಯತರಾಗಲಿ ಪ್ರಾಮಾಣಿಕವಾಗಿ ಆ ಮತಗಳ ಅನುಯಾಯಿಗಳ ಡಾಂಭಿಕತನವನ್ನು ಟೀಕೆಗೆ ಒಳಗು ಮಾಡುತ್ತಾರೆ. 'ತೀರ್ಥವ ಪಡಿದವರೆಲ್ಲ ತಿರುನಾರಾಯಣನ ನಾಮಧಾರಿಗಳ' ಎಂದು ಎಲ್ಲಾ ಮತದವರ ಡಂಭತನವು ಅಂದಿನ ಸಮಾಜದಲ್ಲಿ ಕಲುಷಿತಗೊಂಡಿದ್ದವೆಂದು ತಿಳಿಯಬಹುದಾಗಿದೆ.

ತಲ್ಲಣಿಸದಿರು ಕಂಡ್ಯ ತಾಳು ಮನವೆ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ.

ಎಂದು ಬದುಕಿನ ನಾನಾ ಬಗೆಯ ಬವಣೆಗಳಲ್ಲಿ ತಲ್ಲಣಿಸುವ ಮನಸ್ಸಿಗೆ ಕನಕದಾಸರು ದೈವರಕ್ಷಣೆಯ ಅಭಯ ಉಂಟೆಂದು ಸಾಂತ್ವನ ನೀಡುವ ರೀತಿ ವಿಶಿಷ್ಟವಾಗಿದೆ. ಇಲ್ಲಿ ವೃಕ್ಷಕ್ಕೆ ನೀರೆರೆದವರು, ಪಕ್ಷಿಗಳಿಗೆ ಅನ್ನವಿತ್ತವರು, ಕಪ್ಪೆಗಳಿಗೆ ಆಹಾರ ತಂದಿತ್ತವರು ಯಾರೂ ? ಎಂಬ ಬೆರಗು, ವಿಸ್ಮಯ ಮೂಲದ ಪ್ರಶ್ನೆಯ ಮೂಲಕ ದಾಸರಿಗೆ ಉತ್ತರ ಸಿಗುತ್ತದೆ. 'ಹುಟ್ಟಿಸಿದ ದೇವ ತಾ ಹೊಣೆಗಾರ' ಇಲ್ಲಿ ದೃಷ್ಟಾಂತಗಳ ಸೊಬಗೇ ಅಪೂರ್ವವಾಗಿದೆ. ಸಾಮಾನ್ಯವಾಗಿ ಇಂಥಹ ವಿಚಾರಗಳನ್ನು ಹೇಳಲು ಪುರಾಣದ ಪ್ರಸಂಗಗಳನ್ನು ಆಧಾರವಾಗಿ ಒಡ್ಡುವುದು ದಾಸ ಪರಂಪರೆಯ ರೀತಿ ಆದರೆ ದೈವ ಕಾರುಣ್ಯವನ್ನು ಸಮರ್ಥಿಸಲು ದಾಸರು ಕೊಡುವ ಆಧಾರಗಳು ಪ್ರಾಕೃತಿಕವಾಗಿದ್ದು ಆ ಕಾರಣದಿಂದಲೇ ಈ ಪದ್ಯದ ವ್ಯಾಪ್ತಿ ವಿಶಾಲವಾಗುತ್ತದೆ.

ನೆಚ್ಚದಿರುವ ಸಂಸಾರ ನೆಲೆಯಲ್ಲ ವೀ ಕಾಯ'
'ದಾನ ಧರ್ಮವ ಮಾಡಿ ಸುಖಿಯಾಗು ಮನವೆ'
'ತನು ನಿನ್ನದು ಜೀವನ ನಿನ್ನದು'

ಎಂಬ ಕೀರ್ತನೆಯ ಸಾಲುಗಳಲ್ಲಿ ಮನಸ್ಸಿನ ಹೊಯ್ದಾಟಗಳು ಕಾಣುತ್ತವೆ. ಆತ್ಮ ಶೋಧನೆ. ಪ್ರತಿಯೊಬ್ಬ ಸಾಧಕನು ಕೈಗೊಳ್ಳಬೇಕಾದ ಸಾಧÀನ ಶಾಶ್ವತವಾದ ಸುಖವನ್ನು ನೀಡುವುದರೊಂದಿಗೆ ಈ ಕಾರ್ಯ ಸಾರ್ಥಕತೆಯನ್ನು ಪಡೆಯಬೇಕು, ಅದಕ್ಕಾಗಿ ದಾನ ಧರ್ಮವ ಮಾಡಿ ಸುಖಿಯಾಗಿರು ಎನ್ನುತ್ತಾರೆ. ನಮ್ಮಲ್ಲಿರುವ ವಸ್ತುಗಳೆಲ್ಲ ಯಾವುದಾದರು ಯಾರಿಗಾದರು ಪ್ರಯೋಜನಕ್ಕೆ ಬರಬೇಕು ಇಲ್ಲದಿದ್ದರೆ ಅದು ಇದ್ದು ಏನು

ಪ್ರಯೋಜನ ತಾನು ಉಣ್ಣದೆ ಪರರಿಗಿಕ್ಕದ ಧನವಿದ್ಯಾತಕೆ ಮಾನ ಹೀನವಾಗಿ ಬಾಳ್ವ ಮನುಜನೇಕೆ ಜ್ಞಾನವಿಲ್ಲದೆ ನೂರು ಕಾಲ ಬದುಕಲೇಕೆ ಎಂದು ಅನಿಶ್ಚಿತವಾದ ಈ ದೇಹವಿದ್ದೇನು ಫಲ ? ಇರುವಷ್ಟು ಕಾಲ ಬೇರೆಯವರಿಗೆ ಉಪಕಾರಿಯಾಗಿರಬೇಕೆಂದು ದಾಸರ ಉಪದೇಶ. ನಾವು ಜೀವನ ತೊರೆದು ಹೋಗುವಾಗ ನಮ್ಮ ಹಿಂದೆ ಏನೂ ಬರುವುದಿಲ್ಲ ದಾನ ಧರ್ಮ ಮಾತ್ರ ಬರುವುದು.

ಏನು ಬರವುದೋ ಸಂಗಡೇನು ಬರುವುದೋ ದಾನಧರ್ಮ ಮಾಡಿ ಬಹು ನಿಧಾನಿ ಎನಿಸಿಕೊಳ್ಳೋ ಮನುಜ ಬಂಡಿ ತುಂಬ ಇದ್ದ ಧನವು ಹಿಂದೆ ಉಳಿವುದಲ್ಲೊ ನಿನ್ನ ಪೊಂದಿಕೊಂಡು ಬರುವ ವಸ್ತು ಕೀರ್ತಿ ಅಪಕೀರ್ತಿ ಎರಡೆ ನಾವು ಗಳಿಸಿದ ಕೀರ್ತಿ, ಅಪಕೀರ್ತಿಗಳೆರಡೇ ಬರುವುದು. ಆದುದರಿಂದ ಕೀರ್ತಿವಂತರಾಗಿ ಬಾಳಬೇಕು ಎಂದಿದ್ದಾರೆ. ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣುಬಟ್ಟೆಗಾಗಿ ತುತ್ತು ಹಿಟ್ಟಿಗಾಗಿ ವೇದಶಾಸ್ತ್ರ, ಪಂಚಾಂಗ ಓದಿಕೊಂಡು ಪರರಿಗೆ ಬೋಧನೆಯ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ. ಇದು ಕೇವಲ ಬದುಕಿಗಾಗಿ, ಶಾಶ್ವತ ಮುಕ್ತಿಗಾಗಿ ಕಾಗಿನಲೆಯಾದಿಕೇಶವನ ಧ್ಯಾನವನ್ನು ಮಾಡುವುದು ಮುಕ್ತಿಗಾಗಿ ಆನಂದಕ್ಕಾಗಿ. ಆದ್ದರಿಂದ ಭಗವಂತನನ್ನು ಪ್ರಾರ್ಥಿಸಿ ಬದುಕನ್ನು ಸಾರ್ಥಕಪಡಿಸಿಕೊಳ್ಳಿ ಎಂದಿದ್ದಾರೆ. 'ಜಲದ ಬೊಬ್ಬುಳಿಯಂತೆ ಸ್ಥಿರವಲ್ಲವೀ ದೇಹ' ಎನ್ನುವ ಮುಖಾಂತರ ಜೀವನ ಸತ್ಯವನ್ನು ಮಾರ್ಮಿಕವಾಗಿ ತಿಳಿಸಿದ್ದಾರೆ.

ಕನಕದಾಸರಲ್ಲಿ ಮಾನವ ಬದುಕನ್ನು ಅರ್ಥಪೂರ್ಣಗೊಳಿಸುವ ಆದರ್ಶಗಳಿವೆ. ವೈಚಾರಿಕ ಮನೋಧರ್ಮವಿದೆ ಹಲವು ಕೀರ್ತನೆಗಳಲ್ಲಿ ಸದಾಚಾರ, ಸುಸಂಸ್ಕøತಿಯ ನೇರ ಪ್ರಸ್ತಾಪವಿದೆ. ಲೋಭಿಯಾದ ಸಿರಿವಂತ, ಡಂಭಾಚಾರಿಯಾದ ಹರಿಭಕ್ತ, ಅಜ್ಞಾನಿಯಾದ ದುವ್ರ್ಯಸನಿ, ದಾನ-ಧÀರ್ಮ ಮರೆತ ಸ್ವಾರ್ಥ ಇತ್ಯಾದಿಯನ್ನು ಕನಕದಾಸರು ಚಿಕಿತ್ಸಕ ದೃಷ್ಟಿಯಿಂದ ನೋಡಿದ್ದಾರೆ. ಅವರ ಕೀರ್ತನೆಯುದ್ದಕ್ಕೂ ಲೋಕಜ್ಞಾನದ ವ್ಯಾಪ್ತಿ ಮತ್ತು ಪರಿಪಕ್ವತೆ ಎದ್ದು ಕಾಣುತ್ತದೆ. ಡಾ.ಎಚ್.ತಿಪ್ಪೇರುದ್ರಸ್ವಾಮಿಯವರು "ನಮ್ಮ ಸುತ್ತ ಮುತ್ತಲಿನ ಪರಿಸರವನ್ನು ಕಣ್ದೆರೆದು ನೋಡಿದ ಅವರು ಜಾತಿಮತಗಳ ತಾರತಮ್ಯಗಳನ್ನು ಧÀರ್ಮದ ಆಚರಣೆಯ ಹಿನ್ನಲೆಯಲ್ಲಿರುವ ಕುಟಿಲತೆ ಕುಹಕಗಳನ್ನು ಆಧ್ಯಾತ್ಮಿಕ ಚಟುವಟಿಕೆಗಳನ್ನು ಶೋಷಣೆಯ ಜಾಣ್ಮೆಯನ್ನು ಕಂಡು ಕೆರಳುತ್ತಾರೆ. ಸಿಡಿದು ನಿಲ್ಲುತ್ತಾರೆ. ಅನೇಕ ಕೀರ್ತನೆಗಳಲ್ಲಿ ಕಂಡು ಬರುವ ಅವರ ಕಟುವಾದ ಮಾತುಗಳ ಹಿಂದೆ ಅವರ ವೈಚಾರಿಕ ಮನೋಧೈರ್ಯ ಮಿಂಚುತ್ತದೆ. ಸಾಂಪ್ರದಾಯಿಕ ಚೌಕಟ್ಟಿನೊಳಗಿದ್ದು ಅದನ್ನು ಮೀರುವ ಈ ಮನೋಧರ್ಮದ ಹಿಂದೆÀ ಅಪಾರವಾದ ಮಾನವೀಯ ಅನುಕಂಪ ಸಾಮಾಜಿಕ ಕಳಕಳಿ, ಸಾಮಾಜಿಕ ಪ್ರಜ್ಞೆ, ಮಾನವೀಯ ಮಿಡಿತಗಳು ಕಂಡು ಬರುತ್ತದೆ" ಎಂದಿದ್ದಾರೆ. ಈ ಸಾಲುಗಳು ದಾಸರ ಸಾಮಾಜಿಕ ಕಾಳಜಿಗೆ ನಿದರ್ಶನವಾಗಿದೆ.

ಪರಾಮರ್ಶನ ಗ್ರಂಥಗಳು

1. ಕನ್ನಡ ಸಾಹಿತ್ಯ ಚರಿತ್ರೆ. ಹೆಚ್ . ನಂಜೇಗೌಡ (2012)
2. ಕನ್ನಡ ಸಾಹಿತ್ಯ ಸಂಸ್ಕøತಿ ಕೋಶ ಸಂ.ಡಾ.ಚಿ.ಸಿ.ನಿಂಗಣ್ಣ (2012)
3. ಕೀರ್ತನಕಾರರು ಹೆಚ್.ಎಸ್.ವೆಂಕಟೇಶ್ ಮೂರ್ತಿ (2013)